

# ಇದು ರಚ್ಚು ಟೈಮ್ ಗುರು..!

**ಪದ್ಮನಾಭ ಭಟ್**

'ಸ್ಟಾರ್ ನಟರ ಸಿನಿಮಾಗಳಲ್ಲಷ್ಟೇ ನಟಿಸುವ ನಟಿ' ಎಂಬುದು ನಟಿ ರಚಿತಾ ರಾಮ್ ಅವರ ಸಿನಿಮಾಯಾನದ ಬಗ್ಗೆ ಇದ್ದ ಒಂದು ಟ್ಯಾಗ್‌ಲೈನ್. ಇದನ್ನು ಕೆಲವರು ಸಕಾರಾತ್ಮಕವಾಗಿಯೂ ಕೆಲವರು ವ್ಯಂಗ್ಯವಾಗಿಯೂ ಹೇಳುತ್ತಿದ್ದರು. ವೃತ್ತಿಜೀವನದ ಆರಂಭದಲ್ಲಿ ರಚಿತಾರಾಮ್ ಅಭಿನಯಿಸಿದ ಸಿನಿಮಾಗಳನ್ನು ನೋಡಿದರೆ ಈ ಮಾತು ಪೂರ್ತಿ ಸುಳ್ಳಲ್ಲ ಎನ್ನುವುದೂ ವೇದ್ಯಾಗುತ್ತದೆ. ದೊಡ್ಡ ಬ್ಯಾನರ್, ಸ್ಟಾರ್ ನಟರ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಲೇ ತಮ್ಮ ವೃತ್ತಿಬದುಕನ್ನು ರೂಪಿಸಿಕೊಳ್ಳುತ್ತ ಬಂದವರು ಅವರು.

ಕೆಲವು ವರ್ಷಗಳ ಹಿಂದೆ ಈ ಹೊಗಳಿಕೆಯಲ್ಲಿಯೇ ತಮ್ಮ ಮಿತಿಯೂ ಇದೆ ಅನ್ನುವುದು ಅವರಿಗೆ ಅರಿವಾಯಿತೇನೋ. ಹಾಗಾಗಿ ಸಮಯ ಸಿಕ್ಕಾಗೆಲ್ಲ, 'ನಾನು ಬರೀ ಸ್ಟಾರ್ ನಟರ ಜೊತೆಗೆ ಮಾತ್ರವಲ್ಲ, ಹೊಸಬರ ಸಿನಿಮಾಗಳಲ್ಲಿಯೂ ನಟಿಸುತ್ತೇನೆ. ಹೊಸ ರೀತಿಯ ಪಾತ್ರಗಳಿಗೆ ನನ್ನನ್ನು ನಾನು ಒಡ್ಡಿಕೊಳ್ಳಲು ಸಿದ್ಧಳಿದ್ದೇನೆ. ಆದರೆ ಪಾತ್ರ ಚೆನ್ನಾಗಿರಬೇಕಷ್ಟೆ' ಎಂಬ ಧ್ವನಿಯಲ್ಲಿ ಮಾತಾಡಲು ಆರಂಭಿಸಿದ್ದರು. ಬರೀ ಮಾತಾಡುವುದಷ್ಟೇ ಅಲ್ಲ, ಈ ಗುಳಿಕೆನ್ನೆಯ ಹುಡುಗಿ ಹೊಸ ಪ್ರಯೋಗಗಳಿಗೆ ಮುಕ್ತವಾಗಿ ತಮ್ಮನ್ನು ತಾವು ಒಡ್ಡಿಕೊಳ್ಳಲಿಕ್ಕೂ ಪ್ರಾರಂಭಿಸುತ್ತಿದ್ದಾರೆ. ಅವರು ಕೆಲಸ ಮಾಡುತ್ತಿರುವ ಹೊಸ ಸಿನಿಮಾಗಳನ್ನು ಗಮನಿಸಿದರೆ ಈ ಮಾತು ಇನ್ನಷ್ಟು ಸ್ಪಷ್ಟವಾಗಿ ಅರಿವಾಗುತ್ತದೆ.

# ಐದು ಭಾಷೆಗಳಲ್ಲಿ ಮಾರ್ಟಿನ್ ಅವತಾರ!

ಬಿಗ್ ಬಜೆಟ್ ಪ್ಯಾನ್ ಇಂಡಿಯಾ ಸಿನಿಮಾಗಳ ಟ್ರೆಂಡ್ ಈಗ ಗಾಂಧಿನಗರದಲ್ಲಿ ಜೋರಾಗಿಯೇ ಇದೆ. ಮೂರು, ಐದು, ಎಂಟು, ಹೀಗೆ ಹಲವು ಭಾಷೆಗಳಲ್ಲಿ ತಯಾರಾಗಿ ಬಿಡುಗಡೆಯಾಗುತ್ತಿರುವ ಸಿನಿಮಾಗಳು ಬೇರೆ ಭಾಷೆಗಳಲ್ಲಿ ಎಷ್ಟು ಸದ್ದು ಮಾಡುತ್ತಿವೆ ಎಂಬುದನ್ನು ಗಮನಿಸಿದರೆ ತುಸು ನಿರಾಸೆಯೇ ಆಗುತ್ತದೆ. ಆದರೆ ಈ ನಿರಾಸೆ ಗಾಂಧಿನಗರದ ಮಂದಿಗೆ ಆದಂತಿಲ್ಲ. ಅವರು ಮತ್ತೆ ಮತ್ತೆ ಬಿಗ್ ಬಜೆಟ್, ಪ್ಯಾನ್ ಇಂಡಿಯಾ ಸಿನಿಮಾಗಳನ್ನು ಮಾಡುತ್ತಲೇ ಇದ್ದಾರೆ. ಇತ್ತೀಚೆಗೆ ಇನ್ನೊಂದು ಬಿಗ್ ಬಜೆಟ್ ಸಿನಿಮಾ ಸೆಟ್ಟೇರಿದೆ. ಅದು ಐದು ಭಾಷೆಗಳಲ್ಲಿ ನಿರ್ಮಿತವಾಗುತ್ತಿದೆ. ಧ್ರುವ ಸರ್ಜಾ ಈ ಚಿತ್ರದ ನಾಯಕ.

'ಅದ್ದೂರಿ' ಧ್ರುವ ಸರ್ಜಾ ಅವರ ಸಿನಿಮಾ ಬದುಕಿಗೆ ದೊಡ್ಡ ಶುರುವಾತು ಕೊಟ್ಟ ಸಿನಿಮಾ. ಎ.ಪಿ. ಅರ್ಜುನ್ ಆ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದವರು. ಆದರೆ ಅದರ ನಂತರ ಆ ಯಶಸ್ವಿ ನಿರ್ದೇಶಕ–ನಟ ಕಾಂಬಿನೇಷನ್ ಮತ್ತೆ ಒಟ್ಟಾಗಿರಲಿಲ್ಲ. ಈಗ ಧ್ರುವ ಮತ್ತು ಅರ್ಜುನ್ ಮತ್ತೆ ಒಟ್ಟಾಗಿದ್ದು, 'ಮಾರ್ಟಿನ್' ಸಿನಿಮಾದ ಮೂಲಕ ಐದು ಭಾಷೆಗಳಲ್ಲಿ ಸದ್ದುಮಾಡುವ ಸಿದ್ಧತೆಯಲ್ಲಿದ್ದಾರೆ.

ಇದೊಂದು ಪಕ್ಕಾ ಕಮರ್ಷಿಯಲ್, ಆ್ಯಕ್ಷನ್ ಥ್ರಿಲ್ಲರ್ ಸಿನಿಮಾ ಎಂಬುದು ಚಿತ್ರತಂಡದ ಹೇಳಿಕೆ. ಫಸ್ಟ್ ಲುಕ್ ಮತ್ತು ಟೀಸರ್ ಕೂಡ ಇದನ್ನೇ ಪುಷ್ಟೀಕರಿಸುವಂತಿದೆ.



ಎ.ಪಿ. ಅರ್ಜುನ್

ಕಾಲೇಜ್ ಹಿನ್ನೆಲೆಯಲ್ಲಿ ನಡೆಯುವ ಈ ಸಿನಿಮಾದಲ್ಲಿ ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಹಲವು ಲುಕ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಚಿತ್ರದ ಹೆಸರು ಮಾರ್ಟಿನ್ ಅಂತಾದರೂ ಈ ಚಿತ್ರದಲ್ಲಿ ಧ್ರುವ ಅವರ ಹೆಸರು ಮಾರ್ಟಿನ್ ಅಲ್ಲ. ಇದನ್ನು ಸ್ವತಃ ಧ್ರುವ ಸರ್ಜಾ ಅವರೇ ಸ್ಪಷ್ಟಪಡಿಸಿದ್ದಾರೆ. ಅಂದಮೇಲೆ ಮಾರ್ಟಿನ್ ಯಾರು? ಅವನಿಗೂ ಚಿತ್ರದ ನಾಯಕನಿಗೂ ಏನು ಸಂಬಂಧ? ಚಿತ್ರಕ್ಕೆ ಮಾರ್ಟಿನ್ ಎಂದು ಹೆಸರಿಡಲು ಕಾರಣವೇನು? ಈ ಎಲ್ಲ ಪ್ರಶ್ನೆಗಳಿಗೆ ತೆರೆಯ ಮೇಲೇ ಉತ್ತರ ಸಿಗಬೇಕು.



ಧ್ರುವ ಸರ್ಜಾ

ಬರೀ ಹೊಡೆದಾಟವಷ್ಟೇ ಅಲ್ಲ, ಮುದ್ದಾದ ಪ್ರೇಮಕಥೆಯೂ ಸಿನಿಮಾದಲ್ಲಿದೆ. ಹುಂಬ ಹುಡುಗನಾಗಿಯೂ ಮುಗ್ಧ ಪ್ರೇಮಿಯಾಗಿಯೂ ಧ್ರುವ ಸರ್ಜಾ ಕಾಣಿಸಿಕೊಳ್ಳಲಿದ್ದಾರೆ ಎಂದು ಊಹಿಸಬಹುದು.

ಉದಯ್ ಕೆ. ಮೆಹ್ತಾ ಹಣ ಹೂಡಿರುವ ಈ ಚಿತ್ರದ ಚಿತ್ರೀಕರಣವನ್ನು ಡಿಸೆಂಬರ್ 20ರ ಒಳಗೆ ಮುಗಿಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ. ಕನ್ನಡ, ತೆಲುಗು, ತಮಿಳು, ಮಲಯಾಳಂ ಮತ್ತು ಹಿಂದಿ ಭಾಷೆಗಳಲ್ಲಿ 'ಮಾರ್ಟಿನ್' ಅವತರಿಸಲಿದ್ದಾನೆ.

ಈ ಚಿತ್ರ ಧ್ರುವ ಅವರ ಉಳಿದ ಸಿನಿಮಾಗಳಿಗಿಂತ ಭಿನ್ನವಾಗಿರಲಿದೆ ಎಂಬುದು ಚಿತ್ರತಂಡದ ಹೇಳಿಕೆ. ಇದು ನಿಜವೇನೋ ಅನ್ನಿಸುವಂಥ ಮಾತೊಂದನ್ನು ಧ್ರುವ ಹೇಳಿದ್ದಾರೆ. ಆ ಮಾತು ಏನೆಂದರೆ, ಈ ಚಿತ್ರದಲ್ಲಿ ಅವರಿಗೆ ಜಾಸ್ತಿ ಡೈಲಾಗ್ ಇರುವುದಿಲ್ಲವಂತೆ!

ಚಿತ್ರ: ಕೆ. ಎನ್. ನಾಗೇಶ್‌ಕುಮಾರ್

